50 ಸುವರ್ಣ ಸಂಭ್ರಮ

## ನಿಮ್ಮೊಡನೆ

# ದಾರಿ ಯಾವುದಯ್ಯ?

ಶ್ರವಣಬೆಳಗೊಳದಲ್ಲಿ ಜನವರಿ 31ರಿಂದ ಫೆ.3ರವರೆಗೆ ನಡೆಯಲಿರುವ ಅಖಿಲ ಭಾರತ 81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಸಾಕಷ್ಟು ವಾದ– ವಿವಾದ– ವಾಗ್ವಾದಗಳು ನಡೆದಿವೆ. ಅಧ್ಯಕ್ಷರ ಆಯ್ಕೆಯ ಬಗ್ಗೆ ಚರ್ಚೆ ನಡೆದಂತೆಯೇ, ಸಮ್ಮೇಳನ ನಡೆಯುವ ಸ್ಥಳದ ಬಗ್ಗೆಯೂ ವಿವಾದ ಉಂಟಾಯಿತು. ಹಾವೇರಿಯಲ್ಲಿ ನಡೆಯಬೇಕಾಗಿದ್ದ ಸಮ್ಮೇಳನ ಈಗ ಶ್ರವಣಬೆಳಗೊಳಕ್ಕೆ ಸ್ಥಳಾಂತರಗೊಂಡಿದೆ. ಪರಂಪರೆಯಿಂದ ಶ್ರೀಮಂತವಾಗಿರುವ ಕನ್ನಡ ಸಾಹಿತ್ಯಕ್ಕೆ ಇಂತಹ ಸಮ್ಮೇಳನಗಳಿಂದ ಹೊಸ ಕೊಡುಗೆ ಏನು ದೊರಕುತ್ತದೆ ಎಂಬ ಪ್ರಶ್ನೆಯೆತ್ತಿದರೆ ಸ್ಪಷ್ಟ ಉತ್ತರ ಕಷ್ಟ. ಸಮ್ಮೇಳನದಲ್ಲಿ ಭಾಗವಹಿಸಿದವರೆಲ್ಲ ಏಕಾಏಕಿ ಸಾಹಿತಿಗಳಾಗುತ್ತಾರೆ ಎಂದಾಗಲೀ, ಸಮ್ಮೇಳನದಲ್ಲಿ ಭಾಗವಹಿಸಿದ್ದರಿಂದ ಸಾಹಿತಿಗಳ ಸೃಜನಶೀಲ ಬರಹ ಹೊಸ ಎತ್ತರಕ್ಕೆ ಏರುತ್ತದೆ ಎಂದಾಗಲೀ ನಿರೀಕ್ಷಿಸುವುದು ಸರಿಯಲ್ಲ. ವರ್ಷಕ್ಕೊಮ್ಮೆ ಎಲ್ಲ ಕನ್ನಡಾಭಿಮಾನಿಗಳೂ, ಸಾಹಿತ್ಯಪ್ರೇಮಿಗಳೂ ಎಲ್ಲ ಪಂಥ, ಪಥಗಳ ಭಿನ್ನಮತಗಳನ್ನು ಮರೆತು ಒಂದೆಡೆ ಕಲೆತು ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ ಎನ್ನುವುದೇ ಮಹತ್ವದ ಸಂಗತಿ. 50 ಸಾವಿರಕ್ಕೂ ಹೆಚ್ಚು ಕನ್ನಡಿಗರು ಸೇರುವ ಸಮ್ಮೇಳನ ಜಾತ್ರೆಯ ಸ್ವರೂಪ ಪಡೆದುಕೊಳ್ಳುವುದು ಸಹಜವೇ. ಅಲ್ಲಿ ಊಟಕ್ಕೆ ಗದ್ದಲ, ಓಓಡಿ ಪತ್ರಕ್ಕೆ ಗಲಾಟೆ ನಡೆಯುವುದನ್ನು ದೊಡ್ಡ ಸಂಗತಿ ಮಾಡಬೇಕಾಗಿಲ್ಲ. ಅದರ ಮಧ್ಯೆ ಗುಣಮಟ್ಟದ ಚರ್ಚೆ ನಡೆದರೆ, ಸಾಹಿತ್ಯಕ ವಾಗ್ವಾದಗಳಿಗೂ ಸಮ್ಮೇಳನ ನೆಲೆಯಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಕನ್ನಡದ ಸಾವಿರಾರು ಪುಸ್ತಕಗಳು ಮಾರಾಟವಾಗುವ ಸಂತಸದ ಸಂಗತಿಯೂ ಸಮ್ಮೇಳನದ ಮಹತ್ವವನ್ನು ಹೆಚ್ಚಿಸುತ್ತದೆ.

ಈ ಸಲದ ಸಮ್ಮೇಳನಕ್ಕೆ ವಿಶೇಷ ಮಹತ್ವವಿದೆ. ಸಮ್ಮೇಳನದ ಅಧ್ಯಕ್ಷತೆಗೆ ಆಹ್ವಾನ ನೀಡಿದ್ದನ್ನು ತಿರಸ್ಕರಿಸಿ ಸಾಹಿತಿ ದೇವನೂರು ಮಹದೇವ ಅವರು ಎತ್ತಿರುವ ಪ್ರಶ್ನೆಗಳು ಈ ವಿಶೇಷ ಮಹತ್ವಕ್ಕೆ ಕಾರಣವಾಗಿವೆ. 'ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದ ಶಿಕ್ಷಣ ಕಡ್ಡಾಯವಾಗದೆ ಅಧ್ಯಕ್ಷತೆ ವಹಿಸುವುದರಲ್ಲಿ ಅರ್ಥವಿಲ್ಲ' ಎನ್ನುವ ಅವರ ಅನ್ನಿಸಿಕೆ ಪ್ರಾಮಾಣಿಕವಾದದ್ದು. ಪರಿಷತ್ತು ಸಮ್ಮೇಳನದಲ್ಲಿ ಗಂಭೀರ ಚರ್ಚೆ ನಡೆಸಿ, ಮಾಧ್ಯಮ ಬಿಕ್ಕಟ್ಟಿನ ಕುರಿತು ಖಚಿತ ತೀರ್ಮಾನವೊಂದಕ್ಕೆ ಬರಬೇಕಾಗಿದೆ. ಮಾತೃಭಾಷೆಗೆ ಸಂಬಂಧಿಸಿ ಕೋರ್ಟು ತೀರ್ಮಾನದ ನೆಪ ಹೇಳಿ ಕಾಲಹರಣ ಮಾಡುವ ಪ್ರವೃತ್ತಿಗೆ ತಾರ್ಕಿಕ ಅಂತ್ಯ ಕೊಡುವುದು ತುರ್ತಾಗಿ ಆಗಬೇಕಾದ ಕೆಲಸ. ಇಂಗ್ಲಿಷ್ ಮಾಧ್ಯಮದ ಶಾಲೆಗಳ ಅಬ್ಬರದಲ್ಲಿ, ಕನ್ನಡದ ಧ್ವನಿ ಕ್ಷೀಣವಾಗುತ್ತಿರುವಾಗ ಕನ್ನಡವನ್ನು ಉಳಿಸುವುದಕ್ಕೆ ಇರುವ ಎಲ್ಲ ದಾರಿಗಳನ್ನೂ ಹುಡುಕಬೇಕಿದೆ. ಆರ್‌ಟಿಇ ಕಾಯ್ದೆ ತಂದಾಗಲೂ ಖಾಸಗಿ ಶಿಕ್ಷಣೋದ್ಯಮಿಗಳು ನೂರೆಂಟು ತಕರಾರುಗಳನ್ನು ತೆಗೆದಿದ್ದರು. ಕಾನೂನಿನ ತೊಡಕುಗಳನ್ನು ಮುಂದಿಟ್ಟಿದ್ದರು. ಆದರೆ 2–3 ವರ್ಷಗಳ ಗೊಂದಲದ ಬಳಿಕ ಈಗ ಸ್ವಲ್ಪ ಮಟ್ಟಿಗಾದರೂ ಆರ್‌ಟಿಇ ನಿಯಮ ಯಶಸ್ಸು ಗಳಿಸಿಲ್ಲವೆ? ಹಾಗೆಯೇ ಕನ್ನಡ ಮಾಧ್ಯಮವನ್ನು ತಿರಸ್ಕರಿಸಿ ಇಂಗ್ಲಿಷ್ ಶಿಕ್ಷಣದ ವ್ಯಾಪಾರಕ್ಕೆ ಅಂಟಿಕೊಂಡಿರುವ ಶಾಲೆಗಳನ್ನು ಸರಿದಾರಿಗೆ ತರಲು ಸಾಧ್ಯವಿಲ್ಲವೆ? ಕನ್ನಡವನ್ನು ಉದ್ಯೋಗದ ಭಾಷೆಯನ್ನಾಗಿಸುವ ಸುಸ್ಥಿರ ನಿಯಮಗಳನ್ನು ಸರ್ಕಾರದ ಮಟ್ಟದಲ್ಲಿ ಜಾರಿಗೆ ತಂದರೆ, ಕನ್ನಡ ಮಾಧ್ಯಮದತ್ತ ಜನರೂ ವಾಲುವಂತಹ ಪರಿಸ್ಥಿತಿ ನಿರ್ಮಾಣ ಆಗುವುದಿಲ್ಲವೆ? ಈ ಕುರಿತಂತೆ ಸಮ್ಮೇಳನದಲ್ಲಿ ಖಚಿತ ಚರ್ಚೆ ನಡೆದರೆ ಒಳ್ಳೆಯದು.

ಈ ಹಿನ್ನೆಲೆಯಲ್ಲಿ ಈ ಸಲದ ಸಾಹಿತ್ಯ ಸಮ್ಮೇಳನದ ವಿವಿಧ ಗೋಷ್ಠಿಗಳನ್ನು ಯೋಜಿಸಿರುವುದು ಸ್ವಾಗತಾರ್ಹ. ಸಂವಿಧಾನ, ರಾಜ್ಯ ಭಾಷಾನೀತಿ, ಕನ್ನಡ ಬದುಕು– ಚಳವಳಿಗಳು, ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ವರದಿಗಳ ಅನುಷ್ಠಾನ– ಮುಂತಾದ ವಿಷಯಗಳಿಗೆ ಸಂಬಂಧಿಸಿ ಮಹತ್ವದ ಗೋಷ್ಠಿಗಳಿವೆ. ಸಮ್ಮೇಳನದಲ್ಲಿ ಸರ್ವಾನುಮತದ ನಿರ್ಣಯವೊಂದಕ್ಕೆ ಬರುವುದು ಕಷ್ಟದ ಕೆಲಸವಲ್ಲ. ಆದರೆ ಸಮ್ಮೇಳನದ ಆ ನಿರ್ಣಯಗಳನ್ನು ಸರ್ಕಾರ ಕಾರ್ಯರೂಪಕ್ಕೆ ತರುವಂತೆ ಒತ್ತಡ ಹೇರುವುದು ಹೇಗೆ.. ಎನ್ನುವುದೇ ಮಹತ್ವದ ಪ್ರಶ್ನೆ.

ಸಮ್ಮೇಳನಕ್ಕೆ ಬಂದವರು ಮದ್ಯ ಸೇವಿಸಬೇಕೆ, ಬೇಡವೇ; ಕೇವಲ ಸಸ್ಯಾಹಾರವನ್ನಷ್ಟೇ ಸೇವಿಸಬೇಕೆ ಎನ್ನುವ ಪ್ರಶ್ನೆಗಳೆಲ್ಲ ಬಾಲಿಶವಾದದ್ದು. ಸಮ್ಮೇಳನದ ಸಂಘಟಕರು ಇಂತಹ ವಿಷಯಗಳನ್ನು ಚರ್ಚಾಸ್ಪದಗೊಳಿಸಿರುವುದು ಅವರ ಅಪಕ್ವತೆಯ ದ್ಯೋತಕ. ಹಾಗೆ ನೋಡಿದರೆ, ಬಹುಸಂಖ್ಯಾತ ಕನ್ನಡಿಗರು ಮಾಂಸಾಹಾರಿಗಳೇ. ಅದಕ್ಕಿಂತ ಮುಖ್ಯವಾದ ಪ್ರಶ್ನೆ ಇಂಗ್ಲಿಷ್ ಮಾಧ್ಯಮದ ಶಾಲೆಗಳದ್ದು. ಸರ್ಕಾರಕ್ಕೆ ತಮ್ಮದು ಕನ್ನಡ ಮಾಧ್ಯಮವೆಂದು ಸುಳ್ಳು ಹೇಳಿ, ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತಿರುವ ಸುಮಾರು 708 ಶಾಲೆಗಳು ಈಗ 'ಇಂಗ್ಲಿಷ್ ಮಾಧ್ಯಮವನ್ನು ಕೋರ್ಟ್ ಸೂಚನೆಯಂತೆ ಅಧಿಕೃತ ಮಾಡಿ' ಎಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕುಳಿತಿವೆ. ಈ ಮಧ್ಯೆ ಹೊಸ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಲು 1502 ಅರ್ಜಿಗಳು ಸರ್ಕಾರಕ್ಕೆ ಬಂದಿವೆ. ಇವೆಲ್ಲವೂ ಇಂಗ್ಲಿಷ್ ಮಾಧ್ಯಮದ್ದೇ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಇಂಗ್ಲಿಷಿನ ಈ ದಾಳಿಯಿಂದ ಕನ್ನಡಿಗರನ್ನು ಪಾರು ಮಾಡಲು ಸಾಹಿತ್ಯ ಸಮ್ಮೇಳನ ಹೊಸ ದಾರಿಯೊಂದನ್ನು ತೋರಿಸಬಹುದೆ?

■ ಬಿ.ಎಂ.ಹನೀಫ್

ಸರ್ಕಾರಕ್ಕೆ ತಮ್ಮದು ಕನ್ನಡ ಮಾಧ್ಯಮವೆಂದು ಸುಳ್ಳು ಹೇಳಿ, ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತಿರುವ ಸುಮಾರು 708 ಶಾಲೆಗಳು ಈಗ 'ಇಂಗ್ಲಿಷ್ ಮಾಧ್ಯಮವನ್ನು ಕೋರ್ಟ್ ಸೂಚನೆಯಂತೆ ಅಧಿಕೃತ ಮಾಡಿ' ಎಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕುಳಿತಿವೆ. ಇಂಗ್ಲಿಷಿನ ದಾಳಿಯಿಂದ ಕನ್ನಡಿಗರನ್ನು ಪಾರು ಮಾಡಲು 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹೊಸ ದಾರಿಯೊಂದನ್ನು ತೋರಿಸಬಹುದೆ?


ಈಶ್ವರ್